# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part –IV A | *ಬೆಂಗಳೂರು*, ಶುಕ್ರವಾರ, ೧೯, ಫೆಬ್ರವರಿ, ೨೦೨೧ (ಮಾಘ, ೩೦, *ಶಕವರ್ಷ*, ೧೯೪೨)<br>BENGALURU, FRIDAY, 19, FEBRUARY, 2021 (Magha, 30, SHAKAVARSHA, 1942) | ನಂ. ೧೯೬<br>No. 196 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 84 ಶಾಸನ 2020, ದಿನಾಂಕ: 19.02.2021**

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020 ಇದಕ್ಕೆ 2021ರ ಫೆಬ್ರುವರಿ ತಿಂಗಳ 17 ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 06 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 06**

(2021ರ ಫೆಬ್ರುವರಿ ತಿಂಗಳ 19ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಅಧಿನಿಯಮ, 2020

(2021 ರ ಫೆಬ್ರುವರಿ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004ನ್ನು (2005ರ ಕರ್ನಾಟಕ ಅಧಿನಿಯಮ 30) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004ರ (2005ರ ಕರ್ನಾಟಕ ಅಧಿನಿಯಮ 30) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ, 4ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು. ಎಂದರೆ:-

"4(ಎ) "ಮಾರುಕಟ್ಟೆ ಗುಪ್ತಮಾಹಿತಿ" ಎಂದರೆ ಮತ್ತು ಒಂದು ಹಣಕಾಸು ಸಂಸ್ಥೆಯ ಬಗ್ಗೆ ಅದರ ಆರ್ಥಿಕ ಸ್ಥಿತಿಗತಿ ಮತ್ತು ಮಾರುಕಟ್ಟೆ ಗತಿಗಳ ಕುರಿತು ಎಲ್ಲಾ ಲಭ್ಯವಿರುವ ಮೂಲಗಳಿಂದ ಮಾಹಿತಿಯನ್ನು ಕಲೆಹಾಕುವ ಪ್ರಕ್ರಿಯೆಯನ್ನು ಹಾಗೂ ಯಾವುದಾದರೂ ವಂಚನೆಯ ಚಟುವಟಿಕೆಗಳು ಇದ್ದಲ್ಲಿ ಅದನ್ನು ಕಂಡುಹಿಡಿಯುವಲ್ಲಿ ನಿಖರ ಮತ್ತು ವಿಶ್ವಾಸಾರ್ಹ ತೀರ್ಮಾನದ ಉದ್ದೇಶಕ್ಕಾಗಿನ ವಿಶ್ಲೇಷಣೆಯನ್ನು ಒಳಗೊಳ್ಳುವುದು.

**3. 3ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1) ಸರ್ಕಾರವು ಅಥವಾ ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಜಿಲ್ಲಾ ಮ್ಯಾಜಿಸ್ಟ್ರೇಟರುಗಳು ಈ ಪ್ರಕರಣದಲ್ಲಿ ಉಲ್ಲೇಖಿಸಲಾದ ದೂರಿನ ಅಥವಾ ಮೋಸದ ವ್ಯವಹಾರದ ಸಂಬಂಧದಲ್ಲಿ, ಸ್ವಪ್ರೇರಣೆಯಿಂದ ಅಥವಾ ಮಾರುಕಟ್ಟೆ ಗುಪ್ತಚರ ವರದಿಗಳ ಅಥವಾ ಪೊಲೀಸ್ ಪ್ರಾಧಿಕಾರಗಳ ಆಧಾರದ ಮೇರೆಗೆ ಫಿರ್ಯಾದನ್ನು ಸ್ವೀಕರಿಸಿದ ಮೇಲೆ ತನಿಖೆ ನಡೆಸುವಂತೆ ಮಾಡಬಹುದು, ಯಾವುದೇ ಹಣಕಾಸು ಸಂಸ್ಥೆಯು ಸಾರ್ವಜನಿಕರು ಅಥವಾ ಸಂಘಗಳು ಅಥವಾ ಯುಕ್ತವೆಂದು ಭಾವಿಸುವ ಇತರ ಸಂಸ್ಥೆಗಳಿಂದ ವಶಪಡಿಸಿಕೊಂಡಿದೆಯೆಂದು ನಂಬಲಾದ ಸ್ವತ್ತುಗಳು ಮತ್ತು ಹಣದ ಕುರಿತು ಮಾಹಿತಿಯನ್ನು ಅದರ ಕಾರ್ಯಕರ್ತರ ಮೂಲಕ ಸಂಗ್ರಹಿಸುವುದು. ಜಿಲ್ಲಾ ಮ್ಯಾಜಿಸ್ಟ್ರೇಟರು ಅವರ ವರದಿಯನ್ನು ಯಾವುದಾದರೂ ಇದ್ದಲ್ಲಿ ದೂರುಗಳೊಂದಿಗೆ ಅವರು ಸ್ವೀಕರಿಸಿದ 4ನೇ ಪ್ರಕರಣದ ಅಡಿಯಲ್ಲಿ ಅಧಿಕೃತ ಪ್ರಾಧಿಕಾರದಿಂದ ಸ್ವೀಕರಿಸಿದ ಜಿಲ್ಲಾ ಮಟ್ಟದ ಅಥವಾ ರಾಜ್ಯ ಮಟ್ಟದ ಪೊಲೀಸ್ ಪ್ರಾಧಿಕಾರಗಳನ್ನು ಅಥವಾ ತನಿಖಾ ಏಜೆನ್ಸಿಗಳನ್ನು ಒಳಗೊಂಡ ತಪಾಸಣಾ ಅಥವಾ ವಿಚಾರಣಾ ವರದಿಯೊಂದಿಗೆ ಸರ್ಕಾರಕ್ಕೆ (ಕಂದಾಯ ಇಲಾಖೆ) ಆದಷ್ಟು ಬೇಗನೆ ಕಳುಹಿಸತಕ್ಕದ್ದು.

(1ಎ) ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಅಥವಾ ಈ ಪ್ರಕರಣದ ಉದ್ದೇಶಗಳಿಗಾಗಿ ಸರ್ಕಾರವು ನಾಮನಿರ್ದೇಶಿಸಿದ ಯಾವುದೇ ಪ್ರಾಧಿಕಾರವು, ಈ ಮುಂದಿನ ವಿಷಯಗಳ ಸಂದರ್ಭದಲ್ಲಿ ತನಿಖೆ ಅಥವಾ ವಿಚಾರಣೆಯನ್ನು ನಡೆಸುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ನಿಹಿತವಾದ ಅದೇ ಅಧಿಕಾರಗಳನ್ನು ಹೊಂದಿರತಕ್ಕದ್ದು:-

(ಎ) ಸಂಶೋಧನೆ ಮತ್ತು ತಪಾಸಣೆ;

(ಬಿ) ವರದಿ ಮಾಡಿಕೊಳ್ಳುವ ಸಂಸ್ಥೆಯ ಯಾವೊಬ್ಬ ಅಧಿಕಾರಿಯನ್ನು ಒಳಗೊಂಡು ಯಾವೊಬ್ಬ ವ್ಯಕ್ತಿಯ ಹಾಜರಾತಿಯನ್ನು ಜಾರಿಗೊಳಿಸುವುದು ಮತ್ತು ಪ್ರಮಾಣಿಸುವುದರ ಮೂಲಕ ಪರೀಕ್ಷೆಗೊಳಪಡಿಸುವುದು;

(ಸಿ) ದಾಖಲೆಗಳನ್ನು ಹಾಜರುಪಡಿಸುವಂತೆ ಒತ್ತಾಯಪಡಿಸುವುದು;

(ಡಿ) ಶಪಥಪತ್ರಗಳ ಮೇಲೆ ಸಾಕ್ಷ್ಯವನ್ನುಪಡೆದುಕೊಳ್ಳುವುದು;

(ಇ) ಸಾಕ್ಷಿಗಳು ಮತ್ತು ದಸ್ತಾವೇಜುಗಳ ತಪಾಸಣೆಗಾಗಿ ಕಮೀಷನುಗಳನ್ನು ನೀಡುವುದು; ಮತ್ತು

(ಎಫ್) ನಿಯಮಿಸಬಹುದಾದ ಯಾವುದೇ ಇತರ ವಿಷಯ.

(1ಬಿ) ಹಾಗೆ ಸಮನು ಮಾಡಲಾದ ಎಲ್ಲಾ ವ್ಯಕ್ತಿಗಳು ಖುದ್ದಾಗಿ ಅಥವಾ ಅಧಿಕೃತ ಏಜೆಂಟರುಗಳ ಮೂಲಕ ಹಾಜರಾಗಲು ಬದ್ಧರಾಗಿರತಕ್ಕದ್ದು, ಅಂಥ ಅಧಿಕಾರಿಯು, ಅವರು ಪರೀಕ್ಷಿಸಿದ ಅಥವಾ ಮಾಡಿದ ಹೇಳಿಕೆಗಳ ಸಂಬಂಧದಲ್ಲಿ ಯಾವುದೇ ವಿಷಯದ ಮೇಲೆ ಸತ್ಯವನ್ನು ಹೇಳುವುದಕ್ಕೆ ಮತ್ತು ಅವಶ್ಯಕವೆನಿಸಬಹುದಾದ ಅಂಥ ದಸ್ತಾವೇಜುಗಳನ್ನು ಹಾಜರುಪಡಿಸಲು ಬದ್ಧನಾಗಿರತಕ್ಕದ್ದೆಂದು ನಿರ್ದೇಶಿಸಬಹುದು.

(1ಸಿ) ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ವ್ಯವಹರಣೆಯು, ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 193ನೇ ಪ್ರಕರಣ ಮತ್ತು 228ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನ್ಯಾಯಾಂಗ ವ್ಯವಹರಣೆ ಎಂಬುದಾಗಿ ಭಾವಿಸತಕ್ಕದ್ದು."

(ii) (2)ನೇ ಉಪಪ್ರಕರಣದಲ್ಲಿ,-

(ಎ) (i)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"(i) ಸ್ವಪ್ರೇರಣೆಯಿಂದ ಅಥವಾ ಮಾರುಕಟ್ಟೆ ಗುಪ್ತಚರ ವರದಿಗಳ ಆಧಾರದ ಮೇಲೆ ಅಥವಾ ಯಾವುದೇ ಠೇವಣಿದಾರರಿಂದ ಸ್ವೀಕರಿಸಿದ ದೂರಿನ ಮೇರೆಗೆ ಅಥವಾ ಅನ್ಯಥಾ, ಯಾವುದೇ ಹಣಕಾಸು ಸಂಸ್ಥೆಯು,-

(ಎ) ಅವಧಿ ಮುಕ್ತಾಯಗೊಂಡ ಠೇವಣಿಯನ್ನು ಅಥವಾ ಠೇವಣಿದಾರರ ಬೇಡಿಕೆಯ ಮೇರೆಗೆ ಹಿಂದಿರುಗಿಸಲು; ಅಥವಾ

(ಬಿ) ಬಡ್ಡಿ ಭರವಸೆ ನೀಡಿದ ಪ್ರಯೋಜನವನ್ನು ಪಾವತಿಸಲು; ಅಥವಾ

(ಸಿ) ಅಂಥ ಠೇವಣಿಯ ವಿರುದ್ಧ ಸೇವೆಯನ್ನು ಒದಗಿಸಲು,

- ವಿಫಲವಾಗಿದೆ ಎಂಬುದಾಗಿ ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ಮನದಟ್ಟಾದರೆ; ಅಥವಾ"

**4. 4ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ,-

(ಎ) (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(1) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಸಕ್ಷಮ ಪ್ರಾಧಿಕಾರಿಯು ಅಥವಾ ಈ ಸಂಬಂಧದಲ್ಲಿ ಸರ್ಕಾರವು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರು ಅಥವಾ ಸಕ್ಷಮ ಪ್ರಾಧಿಕಾರಿಯು ಪ್ರಾಧಿಕರಿಸಿದ ಇತರ ಯಾವೊಬ್ಬ ಪ್ರಾಧಿಕಾರಿಯು, ಯಾವುದೇ ರಿಜಿಸ್ಟರು, ಪುಸ್ತಕ, ದಾಖಲೆ, ಕಾಗದಪತ್ರ, ಅರ್ಜಿಯನ್ನು,ವಿದ್ಯುನ್ಮಾನ ಮಾಹಿತಿ ಸಂಗ್ರಹಣೆ ಮತ್ತು ಮರು ಪಡೆಯುವಿಕೆ ಸಾಧನದಲ್ಲಿ ಅಥವಾ ಮಾಧ್ಯಮದಲ್ಲಿನ ಮಾಹಿತಿಯನ್ನು, ವಿಲೇಖ ಅಥವಾ ವ್ಯವಹರಣೆಗಳನ್ನು ಇಡಲಾಗಿದೆ ಎಂದು ನಂಬಲು ಕಾರಣವಿರುವ ಯಾವುವೇ ಆವರಣಗಳನ್ನು ಪ್ರವೇಶಿಸಲು ಮತ್ತು ಶೋಧಿಸಲು ಮತ್ತು ತಪಾಸಣೆ ಮಾಡಲು ಮತ್ತು ತಾನು ಅವಶ್ಯಕವೆಂದು ಭಾವಿಸುವಂಥ ಟಿಪ್ಪಣಿಗಳನ್ನು ಮತ್ತು ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಲು, ಚರಾಸ್ತಿಗಳನ್ನು ವಶಪಡಿಸಿಕೊಳ್ಳಲು ಮತ್ತು ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಹಾಗೂ ಅಂಥ ಹಣಕಾಸು ಸಂಸ್ಥೆಯು ಅದರ

ಹೆಸರಿನಲ್ಲಿ ಅಥವಾ ಯಾವುದೇ ಇತರ ವ್ಯಕ್ತಿಯ ಹೆಸರಿನಲ್ಲಿ ಹಣಕಾಸು ಸಂಸ್ಥೆಯು ಸಂಗ್ರಹಿಸಿದ ಠೇವಣಿಗಳಿಂದ ಮತ್ತು ಅದರ ಪೈಕಿ ಸ್ವಾಧೀನಪಡಿಸಿಕೊಂಡಿದೆ ಎಂದು ನಂಬಲಾದ ಹಣ ಅಥವಾ ಸ್ವತ್ತನ್ನು ಜಪ್ತಿ ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(ಬಿ) (2) ನೇ ಉಪಪ್ರಕರಣದಲ್ಲಿ "ಹೆಸರಿಸಿದ ಪ್ರಾಧಿಕಾರ ಅಥವಾ ಅಧಿಕೃತಗೊಳಿಸಿದ ಹೆಸರಿಸಿದ ಪ್ರಾಧಿಕಾರವು ಯಾವುದೇ ಇತರ ಪ್ರಾಧಿಕಾರ" ಎಂಬ ಪದಗಳಿಗೆ "ಸಕ್ಷಮ ಪ್ರಾಧಿಕಾರ ಅಥವಾ ಪೊಲೀಸ್ ಪ್ರಾಧಿಕಾರ ಅಥವಾ ಸರ್ಕಾರವು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರು ಅಥವಾ ಸಕ್ಷಮ ಪ್ರಾಧಿಕಾರವು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 5ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮ 5ನೇ ಪ್ರಕರಣದಲ್ಲಿ,-

(ಎ) (1) ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಯಾವುದೇ ಒಂದು ಹಣಕಾಸು ಸಂಸ್ಥೆಗೆ ಸಂಬಂಧಿಸಿದ ಪ್ರಕರಣಗಳು ಒಂದು ಜಿಲ್ಲೆಗಿಂತ ಹೆಚ್ಚಿನದರಲ್ಲಿ ವಿಸ್ತರಿಸಿದರೆ, ರಾಜ್ಯ ಸರ್ಕಾರವು ಅಂಥ ಎಲ್ಲಾ ಪ್ರಕರಣಗಳನ್ನು ನಿರ್ವಹಿಸಲು ಒಂದು ಸಕ್ಷಮ ಪ್ರಾಧಿಕಾರವನ್ನು ನೇಮಿಸಬಹುದು."

(ಬಿ) (1) ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) ಸರ್ಕಾರವು ಅಧಿಸೂಚನೆಯ ಮೂಲಕ ಸಕ್ಷಮ ಪ್ರಾಧಿಕಾರಿಗೆ ಸಹಕರಿಸಲು ಸಹಾಯಕ ಆಯುಕ್ತನ ದರ್ಜೆಗಿಂತ ಕಡಿಮೆಯಲ್ಲದ ಯಾವುದೇ ಅಧಿಕಾರಿಯನ್ನು ನೇಮಿಸಬಹುದು, ಆತನು ಈ ಅಧಿನಿಯಮದ ಅಡಿಯಲ್ಲಿ ಪ್ರಕಾರ್ಯವನ್ನು ನಿರ್ವಹಿಸಬಹುದು ಡೆಪ್ಯೂಟಿ ಕಮೀಷನರರ ದರ್ಜೆ ಅಥವಾ ಮೇಲಿನ ದರ್ಜೆಯವನಾದಲ್ಲಿ ಮತ್ತು ಹೆಸರಿಸಿದ ನ್ಯಾಯಾಲಯದಲ್ಲಿ ಆತನ ಪರವಾಗಿ ಶಪಥಪತ್ರವನ್ನು ದಾಖಲಿಸಲೂಬಹುದು."

(ಸಿ) (2) ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಕಂದಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿಯು ಸಕ್ಷಮ ಪ್ರಾಧಿಕಾರಿಯ ಮನವಿಯ ಮೇಲೆ ಈ ಅವಧಿಯನ್ನು ಸಿಂಧುವಾದ ಕಾರಣಗಳುಳ್ಳ ಪ್ರಕರಣಗಳಲ್ಲಿ ಮತ್ತು ಪ್ರಕರಣದ ಅಂಶಗಳ ಆಧಾರದ ಮೇರೆಗೆ ಮತ್ತೆ ಹದಿನೈದು ದಿನಗಳವರೆಗೆ ವಿಸ್ತರಿಸಬಹುದು."

**6. 6ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 6ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

(3) ಸರ್ಕಾರವು,-

(ಎ) ಆಸ್ತಿಗಳ ಮೌಲ್ಯನಿರ್ಧರಣೆಗಾಗಿ ಮತ್ತು ನಿರೀಕ್ಷಿತ ಖರೀದಿದಾರರಿಗೆ ಆಸ್ತಿಗಳನ್ನು ಮಾರಾಟ ಮಾಡಲು ಸಹಾಯಕ್ಕಾಗಿ ಏಜೆನ್ಸಿಗಳನ್ನು; ಮತ್ತು

(ಬಿ) ಹಣ ಹರಿವಿನ ಕಾನೂನು ವೈಜ್ಞಾನಿಕ ಲೆಕ್ಕಪರಿಶೋಧನೆಗಾಗಿ ನ್ಯಾಯ ಸಂಬಂಧಿ (Forensic) ಲೆಕ್ಕಪರಿಶೋಧಕರು ಮತ್ತು ಡಿಜಿಟಲ್ ಲೆಕ್ಕಪರಿಶೋಧಕರನ್ನು, ಪಟ್ಟಿಮಾಡತಕ್ಕದ್ದು ಅಥವಾ ಅಳವಡಿಸಿ ಕೊಳ್ಳತಕ್ಕದು ಅಥವಾ ಅಧಿಸೂಚಿಸತಕ್ಕದ್ದು.

ಸಕ್ಷಮ ಪ್ರಾಧಿಕಾರಿಯು ಆಸ್ತಿಗಳನ್ನು ಮಾರಾಟ ಮಾಡುವುದಕ್ಕಾಗಿ ಆಸ್ತಿಗಳ ಮೌಲ್ಯನಿರ್ಧರಣೆ ನಡೆಸಲು ಹಾಗೂ ಹಣ ಹರಿವಿನ ನ್ಯಾಯ ಸಂಬಂಧಿ ಮತ್ತು ಡಿಜಿಟಲ್ ಲೆಕ್ಕಪರಿಶೋಧನೆಗಾಗಿ ಅಂಥ ಏಜೆನ್ಸಿಗಳ ಸೇವೆಯನ್ನು ಬಳಸಿಕೊಳ್ಳತಕ್ಕದ್ದು;

ಪರಂತು ಸಕ್ಷಮ ಪ್ರಾಧಿಕಾರವು ಅಂಥ ಏಜೆನ್ಸಿಗಳನ್ನು ಪಟ್ಟಿಮಾಡುವವರೆಗೆ ಸರ್ಕಾರವು ಆಸ್ತಿಗಳ ಮೌಲ್ಯ ನಿರ್ಧರಣೆಗೆ ಮತ್ತು ಕಾನೂನಿನ ಅನುಸಾರವಾಗಿ ನಿರೀಕ್ಷಿತ ಖರೀದದಾರರಿಗೆ ಆಸ್ತಿಗಳನ್ನು ಮಾರಾಟ ಮಾಡಲು ನ್ಯಾಯಾಲಯಕ್ಕೆ ಸಹಕರಿಸುವುದಕ್ಕಾಗಿ ಭಾರತೀಯ ಭದ್ರತೆಗಳ ವಿನಿಮಯ ಮಂಡಳಿಯು (ಸೆಬಿ) ಪಟ್ಟಿಮಾಡಿದ ಏಜೆನ್ಸಿಗಳ ಸೇವೆಗಳನ್ನು ಸಹ ಬಳಸಿಕೊಳ್ಳಬಹುದು;

ಮತ್ತು ಪರಂತು ಸಕ್ಷಮ ಪ್ರಾಧಿಕಾರವು, ಆಸ್ತಿಗಳ ಮೌಲ್ಯನಿರ್ಧರಣೆಗಾಗಿ, ಅಂಥ ಏಜೆನ್ಸಿಗಳನ್ನು ರಾಜ್ಯವು ಪಟ್ಟಿ ಮಾಡುವವರೆಗೆ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಮರುಸ್ಥಾಪನೆ ಹಾಗೂ ಭದ್ರತಾ ಹಕ್ಕುಗಳ ಜಾರಿ ಅಧಿನಿಯಮ, 2002 ರ (2002 ರ ಕೇಂದ್ರ ಅಧಿನಿಯಮ ಸಂಖ್ಯೆ: 54) ಅಡಿಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಆಸ್ತಿಗಳ ಮೌಲ್ಯನಿರ್ಧರಣೆಗಾಗಿ ಅನುಮೋದಿಸಿದ ಮೌಲ್ಯ ನಿರ್ಧರಣೆಗಾರರ ಸೇವೆಗಳನ್ನು ಸಹ ಬಳಸಬಹುದು;

ಅಲ್ಲದೆ ಪರಂತು ಸಕ್ಷಮ ಪ್ರಾಧಿಕಾರಿಯು ಹಣ ಹರಿವಿನ ನ್ಯಾಯ ಸಂಬಂಧಿ ಲೆಕ್ಕಪರಿಶೋಧನೆಗಾಗಿ ರಾಜ್ಯವು ಅಂಥ ಏಜೆನ್ಸಿಗಳನ್ನು ಪಟ್ಟಿಮಾಡುವವರೆಗೆ ಅಗತ್ಯವಿರುವೆಡೆಯಲ್ಲಾ ಭಾರತೀಯ ಬ್ಯಾಂಕರುಗಳ ಸಂಘವು ಪಟ್ಟಿಮಾಡಿದ ಕಾನೂನು ವೈಜ್ಞಾನಿಕ ಲೆಕ್ಕಪರಿಶೋಧಕರು ಅಥವಾ ಡಿಜಿಟಲ್ ಲೆಕ್ಕಪರಿಶೋಧಕರ ಸೇವೆಗಳನ್ನು ಸಹ ಬಳಸಬಹುದು."

**7. 7ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 7ನೇ ಪ್ರಕರಣದ (1) ನೇ ಉಪಪ್ರಕರಣದಲ್ಲಿ "ನೇಮಕದ ದಿನಾಂಕದಿಂದ ಮೂವತ್ತು ದಿನಗಳೊಳಗೆ" ಎಂಬ ಪದಗಳಿಗೆ "ನೇಮಕ ದಿನಾಂಕದಿಂದ ಅರವತ್ತು ದಿನಗಳೊಳಗೆ ಅಥವಾ 3ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಿಂದ ಅನುಮತಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಇವುಗಳಲ್ಲಿ ಯಾವುದು ಆನಂತರವೋ ಅಲ್ಲಿಯವರೆಗೆ" ಎಂಬ ಪದಗಳು ಮತ್ತು ಅಂಕಿಯನ್ನು ಪ್ರತಿಯೋಜಿಸತಕ್ಕದ್ದು.

**8. 9ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 9ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"**9. ಹಣಕಾಸು ಸಂಸ್ಥೆಯಿಂದ ವಂಚನೋದ್ದೇಶದ ತಪ್ಪುವಿಕೆ.-**(1) ಯಾವುದೇ ಹಣಕಾಸು ಸಂಸ್ಥೆಯು, ವಾಗ್ದಾನ ಮಾಡಿದಂತೆ ಅವಧಿಯು ಪೂರ್ಣಗೊಂಡ ಮೇಲೆ ಬಡ್ಡಿ, ಬೋನಸ್, ಲಾಭದ ರೂಪದಲ್ಲಿ ಅಥವಾ ಇತರ ಯಾವುದೇ ರೂಪದಲ್ಲಿ ಯಾವುದೇ ಪ್ರಯೋಜನದ ಜೊತೆಗೆ ಠೇವಣಿಯ ಯಾವುದೇ ಮರುಸಂದಾಯ ಮಾಡಲು ವಂಚನೋದ್ದೇಶದಿಂದ ತಪ್ಪಿದರೆ ಅಥವಾ ಠೇವಣಿಗೆ ಪ್ರತಿಯಾಗಿ ಭರವಸೆ ನೀಡಿದಂತೆ ಸೇವೆ ಸಲ್ಲಿಸಲು ಮೋಸದಿಂದ ತಪ್ಪಿದರೆ, ಪ್ರವರ್ತಕ, ನಿರ್ದೇಶಕ, ಪಾಲುದಾರ, ವ್ಯವಸ್ಥಾಪಕನೂ ಸೇರಿದಂತೆ ಪ್ರತಿಯೊಬ್ಬ ವ್ಯಕ್ತಿ ಅಥವಾ ಅಂಥ ಹಣಕಾಸು ಸಂಸ್ಥೆಯ ವ್ಯವಹಾರ ಅಥವಾ ಕಾರ್ಯಕಲಾಪಗಳ ವ್ಯವಸ್ಥಾಪನೆಗೆ ಅಥವಾ ನಡೆಸುವುದಕ್ಕೆ ಹೊಣೆಗಾರನಾದ ಯಾವೊಬ್ಬ ಇತರ ವ್ಯಕ್ತಿ ಅಥವಾ ನೌಕರನು, ಅಪರಾಧ ನಿರ್ಣೀತನಾದ ಮೇಲೆ ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಮತ್ತು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಹಾಗೂ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಹಣಕಾಸು ಸಂಸ್ಥೆಯು ಸಹ ಐದು ಲಕ್ಷ ರೂಪಾಯಿಗಳಿಗೆ ಸಮನಾದ ಮೊಬಲಗಿನವರೆಗೆ ವಿಸ್ತರಿಸಬಹುದಾದ ಅಥವಾ ಅಂಥ ಠೇವಣಿಗಳನ್ನು ಮೊತ್ತದ ರೂಪದಲ್ಲಿ ಹೇಳಬಹುದಾಗಿದ್ದಲ್ಲಿ, ಚಂದಾದಾರ ಅಥವಾ ಸದಸ್ಯನಿಂದ ಸಂಗ್ರಹಿಸಿದ ಒಟ್ಟು ನಿಧಿಗಳ ಮೊತ್ತದ ಎರಡುಪಟ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ, ಒಬ್ಬ ವ್ಯಕ್ತಿಗೆ ಅಕ್ರಮ ಲಾಭ ಅಥವಾ ಇನ್ನೊಬ್ಬ ವ್ಯಕ್ತಿಗೆ ಅಕ್ರಮ ಹಾನಿ ಉಂಟು ಮಾಡುವ ಉದ್ದೇಶದಿಂದ ಒಂದು ಹಣಕಾಸು ಸಂಸ್ಥೆಯು, ತಾನು ವಾಗ್ದಾನ ಮಾಡಿದಂತೆ, ಬಡ್ಡಿ, ಬೋನಸ್, ಲಾಭದ ರೂಪದಲ್ಲಿ, ಅಥವಾ ಇತರ ಯಾವುದೇ ಅಂಥ ರೂಪದ ಪ್ರಯೋಜನಗಳ ಜೊತೆಗೆ ಅಂಥ ಠೇವಣಿಯನ್ನು ಮರುಸಂದಾಯ ಮಾಡಲು ತಪ್ಪಿದರೆ

ಅಥವಾ ಅಂಥ ಠೇವಣಿಗೆ ಪ್ರತಿಯಾಗಿ ವಾಗ್ದಾನ ಮಾಡಿದ ಯಾವುದೇ ನಿರ್ದಿಷ್ಟ ಸೇವೆಯನ್ನು ಒದಗಿಸಲು ತಪ್ಪಿದರೆ ಅಥವಾ ಅಂಥ ಠೇವಣಿಯನ್ನು ಸ್ವೀಕರಿಸುವಾಗ ಕಾರ್ಯಸಾಧ್ಯವಲ್ಲದ ಅಥವಾ ವಾಣಿಜ್ಯ ದೃಷ್ಟಿಯಿಂದ ಊರ್ಜಿತವಾಗುವಂತಹವು ಅಲ್ಲದ ವಾಗ್ದಾನಗಳನ್ನು ಮಾಡಿದ ಕಾರಣದಿಂದ ಉಂಟಾದ, ಅಂಥ ತಪ್ಪುಗಳನ್ನು ಅಥವಾ ಠೇವಣಿಗಳಿಂದ ಬಂದ ಹಣವನ್ನು ಅಥವಾ ಆರ್ಜಿಸಿದ ಸ್ವತ್ತನ್ನು ಅಗತ್ಯ ಬಿದ್ದಾಗ ಹಣವನ್ನು ಮತ್ತೆ ಪಡೆದುಕೊಳ್ಳುವುದು ಸಾಧ್ಯವಾಗದಂತಹ ಅಂತರ್ನಿಹಿತ ಅಪಾಯವಿರುವಂತಹ ರೀತಿಯಲ್ಲಿ ತೊಡಗಿಸಿದ ಕಾರಣದಿಂದ ಮರು ಸಂದಾಯ ಮಾಡಲು ತಪ್ಪಿದಲ್ಲಿ ವಂಚನೋದ್ದೇಶದಿಂದ ಹಾಗೆ ಸಂದಾಯ ಮಾಡಲು ತಪ್ಪಿದೆ ಎಂದು ಅಥವಾ ನಿರ್ದಿಷ್ಟ ಸೇವೆಯನ್ನು ಸಲ್ಲಿಸಲು ವಿಫಲವಾಗಿದೆ ಎಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಈ ಹಿಂದೆ ದಂಡನೀಯ ಅಪರಾಧದ ಸಿದ್ಧದೋಷಿಯಾಗಿರುವ ಯಾರೇ ಆಗಲಿ, ತರುವಾಯದಲ್ಲಿ ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧದ ಸಿದ್ಧದೋಷಿಯಾದರೆ, ಏಳು ವರ್ಷಗಳಿಗೆ ವಿಸ್ತರಿಸಬಹುದಾಗಿರುವ ಐದು ವರ್ಷಗಳಿಗಿಂತ ಕಡಿಮೆ ಇರದ ಅವಧಿಗೆ ಸೆರೆವಾಸ ಶಿಕ್ಷೆಯಿಂದ ಮತ್ತು ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರದ ಮತ್ತು ಅದನ್ನು ಐವತ್ತು ಕೋಟಿ ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) (i) ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ವ್ಯಕ್ತಿಯನ್ನು ಹೊರತುಪಡಿಸಿ ಹಣಕಾಸು ಸಂಸ್ಥೆಯು ಎಸಗಿದ್ದಲ್ಲಿ, ಅಪರಾಧವನ್ನು ಎಸಗಿದ ಸಮಯದಲ್ಲಿ ಸಂಸ್ಥೆಯ ವ್ಯವಹಾರವನ್ನು ನಡೆಸಿದ್ದಂಥ ಪ್ರತಿಯೊಬ್ಬ ವ್ಯಕ್ತಿಯನ್ನು ಅಪರಾಧದ ದೋಷಿಯೆಂಬುದಾಗಿ ಭಾವಿಸತಕ್ಕದ್ದು ಮತ್ತು ಅವರ ವಿರುದ್ಧ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

(ii) ಮೇಲಿನ (i)ನೇ ಖಂಡದಲ್ಲಿ ಏನೇ ಹೇಳಿದಾಗ್ಯೂ, ಅಂಥ ಯಾರೇ ವ್ಯಕ್ತಿಯು ತನ್ನ ಅರಿವಿಗೆ ಬರದೆ ಅಪರಾಧವನ್ನು ಎಸಗಲಾಗಿತ್ತೆಂದು ಅಥವಾ ಅಂಥ ಅಪರಾಧ ಎಸಗುವುದನ್ನು ತಡೆಯಲು ಎಲ್ಲಾ ಯುಕ್ತ ಎಚ್ಚರಿಕೆಯನ್ನು ವಹಿಸಿದ್ದನೆಂದು ಆತನು ಸಾಬೀತುಪಡಿಸಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಆತನು ಗುರಿಯಾಗತಕ್ಕದ್ದಲ್ಲ;

(iii) ಮೇಲಿನ (i) ನೇ ಖಂಡದಲ್ಲಿ ಏನೇ ಹೇಳಿದಾಗ್ಯೂ, ವ್ಯಕ್ತಿಯನ್ನು ಹೊರತುಪಡಿಸಿ ಒಂದು ಹಣಕಾಸು ಸಂಸ್ಥೆಯು ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಲ್ಲಿ, ಮತ್ತು ಅಪರಾಧವನ್ನು,-

(ಎ) ಸಮ್ಮತಿ ಅಥವಾ ಮನಗಾಣಿಸುವದರೊಂದಿಗೆ ಎಸಗಲಾಗಿತ್ತೆಂದು; ಅಥವಾ

(ಬಿ) ಹಣಕಾಸು ಸಂಸ್ಥೆಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ, ಪ್ರವರ್ತಕ, ಪಾಲುದಾರ, ನೌಕರ ಅಥವಾ ಇತರ ವ್ಯಕ್ತಿಯ ಕಡೆಯಿಂದ ಯಾವುದೇ ನಿರ್ಲಕ್ಷ್ಯತನವನ್ನು ಆರೋಪಿಸಬಹುದೆಂದು ಸಾಬೀತಾದರೆ,

- ಅಂಥ ವ್ಯಕ್ತಿಗಳನ್ನು ಅಪರಾಧದ ದೋಷಿಯೆಂದು ಸಹ ಭಾವಿಸತಕ್ಕದ್ದು ಮತ್ತು ಅವರ ವಿರುದ್ಧದ ವ್ಯವಹರಣೆಗೆ ಹಾಗೂ ತದನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು."

**9. 10ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿ, (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಯಾವುದೇ ಹಣಕಾಸು ಸಂಸ್ಥೆಗೆ ಸಂಬಂಧಿಸಿದ ಮೊಕದ್ದಮೆಗಳು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ಹರಡಿಕೊಂಡಿದ್ದರೆ, ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಸಮ್ಮತಿಯೊಂದಿಗೆ ಅಧಿಸೂಚನೆ ಮೂಲಕ, ಅಂಥ ಹಣಕಾಸು ಸಂಸ್ಥೆಗೆ ಸೇರಿದ ಅಂಥ ಎಲ್ಲಾ ಮೊಕದ್ದಮೆಗಳನ್ನು ಕುರಿತು ವ್ಯವಹರಿಸಲು ಜಿಲ್ಲೆಯ ಒಂದು ನ್ಯಾಯಾಲಯವನ್ನು ಅಥವಾ ವಿಶೇಷ ನ್ಯಾಯಾಲಯವಾಗಿ ಸತ್ರ ನ್ಯಾಯಾಧೀಶರನ್ನು ಗೊತ್ತುಪಡಿಸಬಹುದು.

**10. 11ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 11ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ.-

(ಎ) (ಇ) ಖಂಡದಲ್ಲಿ, "ಹಾಗೆ ನಗದಾಗಿ ಪರಿವರ್ತಿತ ಹಣವು ಸಮಗ್ರ ಠೇವಣಿಯ ಹೊಣೆಯನ್ನು ಭರಿಸಲು ಸಾಕಷ್ಟಾಗಿರದಿದ್ದ ಸಂದರ್ಭದಲ್ಲಿ," ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) (ಎಫ್) ಖಂಡದ ತರುವಾಯ, ವಿವರಣೆಗೆ ಮೊದಲು, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,-

"(ಜಿ) ಮೋಸದ ಪ್ರಮಾಣವನ್ನಾಧರಿಸಿ, ಉತ್ಪತ್ತಿಗಳ ವಸೂಲಾತಿಗೆ ಮತ್ತು ಠೇವಣಿದಾರರಿಗೆ ಸಂದಾಯ ಮಾಡುವ ಸಲುವಾಗಿ ಸಮಿತಿಯನ್ನು ರಚಿಸುವುದು ಅಗತ್ಯವೆಂದು ವಿಶೇಷ ನ್ಯಾಯಾಲಯಗಳಿಗೆ ಅನಿಸಿದಾಗಲೆಲ್ಲ, ವಿಶೇಷ ನ್ಯಾಯಾಲಯವು, ಮೊಕದ್ದಮೆಯ ಸಂದರ್ಭವನ್ನಾಧರಿಸಿ ಅಂಥ ಸಮಿತಿಗಳನ್ನು ರಚಿಸಬಹುದು;

(ಹೆಚ್) ಈ ಅಧಿನಿಯಮದ ಅಡಿಯಲ್ಲಿ ಜಪ್ತಿ ಮಾಡಲಾಗುವ ಸ್ವತ್ತುಗಳ ಹರಾಜಿಗಾಗಿ ಅವಶ್ಯವಿರುವಲ್ಲೆಲ್ಲಾ ಇ-ಹರಾಜು ವೇದಿಕೆಯನ್ನು ಬಳಸುವುದು;

(ಐ) ಸ್ವತ್ತುಗಳ ಮೌಲ್ಯನಿರ್ಣಯಕ್ಕೆ ಮತ್ತು ಭಾವಿ ಖರೀದಿದಾರರಿಗೆ ಸ್ವತ್ತುಗಳನ್ನು ಮಾರಾಟ ಮಾಡುವುದಕ್ಕೆ, ಹಣ ವಿಚಾರಣೆಗಳ ವಿಧಿವಿಜ್ಞಾನ ಪರಿಶೋಧನೆಗಾಗಿ ವಿಧಿವಿಜ್ಞಾನ ಪರಿಶೋಧಕರಿಗೆ ಮತ್ತು ಡಿಜಿಟಲ್ ಪರಿಶೋಧಕರಿಗೆ 6ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಿದ ಪಟ್ಟಿ ಮಾಡಿದ ಏಜನ್ಸಿಗಳ ಸೇವೆಗಳನ್ನು ಬಳಸುವುದು;

(ಜೆ) ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ ಸಂಖ್ಯೆ 18) 359ನೇ ಪ್ರಕರಣದ ಅಡಿಯಲ್ಲಿ ಕೇಂದ್ರ ಸರ್ಕಾರವು ನೇಮಕ ಮಾಡಿದ ಅಧಿಕೃತ ಸಮಾಪಕನ ಸೇವೆಗಳನ್ನು ಬಳಸಿಕೊಳ್ಳುವುದು ಮತ್ತು ಅವಶ್ಯವೆಂದು ಭಾವಿಸಿದೆಡೆಯಲ್ಲಿ ಉಚ್ಚ ನ್ಯಾಯಾಲಯಗಳಿಗೆ ವಹಿಸತಕ್ಕದ್ದು;

(ಕೆ) ಸ್ವತ್ತುಗಳ ಮೌಲ್ಯ ನಿರ್ಧರಣೆಗಾಗಿ ಮತ್ತು ಕಾನೂನಿಗನುಗುಣವಾಗಿ ಭಾವಿ ಖರೀದಿದಾರರಿಗೆ ಸ್ವತ್ತುಗಳನ್ನು ಮಾರಾಟ ಮಾಡುವುದಕ್ಕಾಗಿ ನ್ಯಾಯಾಲಯಕ್ಕೆ ನೆರವು ನೀಡಲು ಭಾರತದ ಭದ್ರತಾಪತ್ರ ವಿನಿಮಯ ಮಂಡಳಿಯು ಪಟ್ಟಿಮಾಡಿದ ಏಜನ್ಸಿಗಳ ಸೇವೆಗಳನ್ನು ಬಳಸಿಕೊಳ್ಳುವುದು;

(ಎಲ್) ಹಣಕಾಸು ಆಸ್ತಿಗಳ ಭದ್ರತೆ ಮತ್ತು ಮರುಸ್ಥಾಪನೆ ಹಾಗೂ ಭದ್ರತಾ ಹಕ್ಕುಗಳ ಜಾರಿ ಅಧಿನಿಯಮ, 2002ರ (2002ರ ಕೇಂದ್ರ ಅಧಿನಿಯಮ 54) ಅಡಿಯಲ್ಲಿ ಆಸ್ತಿಗಳ ಮೌಲ್ಯ ನಿರ್ಧರಣೆಗಾಗಿ ಯಾವುದೇ ರಾಷ್ಟ್ರೀಕೃತ ಬ್ಯಾಂಕು ಅನುಮೋದಿಸಿದ ಮೌಲ್ಯ ನಿರ್ಧರಕರ ಸೇವೆಯನ್ನು ಬಳಸಿಕೊಳ್ಳುವುದು;

(ಎಂ) ತಾತ್ಕಾಲಿಕವಾಗಿ ಜಪ್ತಿ ಮಾಡಿದ ಮೌಲ್ಯ ಇಳಿಯಬಹುದಾದ ಚರಾಸ್ತಿಗಳ ಮಾರಾಟಕ್ಕಾಗಿ ಅಂಥ ಆಸ್ತಿಗಳ ಮೌಲ್ಯವು ಕಳೆದುಹೋಗದಂತೆ ತಡೆಯಲು ತ್ವರಿತ ಆದೇಶವನ್ನು ಹೊರಡಿಸುವುದು;

**11. 12ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 12ನೇ ಪ್ರಕರಣದ (6)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(6) (5)ನೇ ಉಪ ಪ್ರಕರಣದ ಮೇರೆಗಿನ ತನಿಖೆಯ ತರುವಾಯ, ವಿಶೇಷ ನ್ಯಾಯಾಲಯವು, ಜಪ್ತಿಯ ತಾತ್ಕಾಲಿಕ ಆದೇಶವನ್ನು ನಿರುಪಾಧಿಕ ಮಾಡುವ ಅಥವಾ ಸ್ವತ್ತಿನ ಒಂದು ಭಾಗವನ್ನು ಜಪ್ತಿಯಿಂದ ಬಿಡುಗಡೆ ಮಾಡುವಮೂಲಕ ಅದನ್ನು ಮಾರ್ಪಡಿಸುವ ಅಥವಾ ಜಪ್ತಿಯ ತಾತ್ಕಾಲಿಕ ಆದೇಶವನ್ನು ರದ್ದುಪಡಿಸುವ ಆದೇಶವನ್ನು ಆದಷ್ಟುಬೇಗನೇ 5ನೇ ಪ್ರಕರಣದ (2)ನೇ

ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ನೂರಾ ಎಂಬತ್ತು ದಿನಗಳ ಒಳಗಾಗಿ ಹೊರಡಿಸತಕ್ಕದ್ದು:

ಪರಂತು, ವಿಶೇಷ ನ್ಯಾಯಾಲಯವು, ಅಂಥ ಹಣಕಾಸು ಸಂಸ್ಥೆಯ ಠೇವಣಿದಾರರಿಗೆ ಮರುಸಂದಾಯಮಾಡುವುದಕ್ಕೆ ಅಗತ್ಯವಾದ ಮೌಲ್ಯಕ್ಕಿಂತ ಕಡಿಮೆ ಇಲ್ಲದಷ್ಟು ಮೌಲ್ಯದ ಸ್ವತ್ತು ಅಥವಾ ಮೊಬಲಗು ಜಪ್ತಿ ಮಾಡಿದುದರಲ್ಲಿ ಉಳಿಯುತ್ತದೆ ಎಂದು ತನಗೆ ಮನವರಿಕೆಯಾದ ಹೊರತು, ಹಣಕಾಸು ಸಂಸ್ಥೆ ಅಥವಾ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಕ್ತಿಯು ಸ್ವತ್ತಿನಲ್ಲಿ ಹೊಂದಿದ್ದಾರೆ ಎಂದು ಮನಗಂಡ ಯಾವುದೇ ಹಿತಾಸಕ್ತಿಯನ್ನು ಜಪ್ತಿಯಿಂದ ಬಿಡುಗಡೆ ಮಾಡತಕ್ಕದ್ದಲ್ಲ:

ಮತ್ತು ಪರಂತು ವಿಶೇಷ ನ್ಯಾಯಾಲಯವು, 3ನೇ ಪ್ರಕರಣದ ಅಡಿಯಲ್ಲಿ ಜಪ್ತಿಯ ಬದಲಿಗೆ ಸ್ವತ್ತಿನ ನ್ಯಾಯಸಮ್ಮತ ಮೌಲ್ಯವನ್ನು ಠೇವಣಿ ಇರಿಸಲು ಅನುಮತಿಯನ್ನು ನೀಡುವಾಗ, ಸ್ವತ್ತುಗಳನ್ನು ಬಿಡುಗಡೆಗೊಳಿಸುವ ಸಮಯದಲ್ಲಿ ಪಟ್ಟಿಮಾಡಿದ ಕನಿಷ್ಟ ಎರಡು ಮೌಲ್ಯ ನಿರ್ಧರಕರ ಮೌಲ್ಯ ನಿರ್ಧರಣೆಯ ವರದಿಯನ್ನು ಪಡೆದುಕೊಳ್ಳಬಹುದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**DEPARTMENT OF PARLIAMENTARY AFFAIRS AND LEGISLATION SECRETARIAT**
**NOTIFICATION**
**NO. DPAL 84 SHASANA 2020, BENGALURU, DATED: 19.02.2021**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಅಧಿನಿಯಮ, 2020 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 06) ನ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## KARNATAKA ACT NO. 06 OF 2021

(First Published in the Karnataka Gazette Extra-ordinary on the 19th day of February, 2021)

## THE KARNATAKA PROTECTION OF INTEREST OF DEPOSITORS IN FINANCIAL ESTABLISHMENTS (AMENDMENT) ACT, 2020

(Received the assent of the Governor on the 17th day of February, 2021)

An Act to amend the Karnataka Protection of Interest of Depositors in Financial Establishments Act, 2004.

Whereas it is expedient to amend the Karnataka Protection of Interest of Depositors in Financial Establishments Act, 2004 (Karnataka Act 30 of 2005) for the purposes hereinafter appearing;

Be it enacted by the Karnataka State Legislature in the Seventy First year of the Republic of India, as follows:-

**1. Short title and commencement.-** (1) This Act may be called the Karnataka Protection of Interest of Depositors in Financial Establishments (Amendment) Act, 2020.

(2) It shall come into force at once.

**2. Amendment of section 2.-** In the Karnataka Protection of Interest of Depositors in Financial Establishments Act, 2004 (Karnataka Act 30 of 2005) (hereinafter referred to as the Principal Act) in section 2, after clause (4), the following shall be inserted, namely:-

"(4a) "Market intelligence" means and includes the process of gathering information from all available sources about a financial establishment regarding its financial position and market trends and analysis for the purpose of accurate and confident decision making in determining the fraudulent activities, if any"

**3. Amendment of section 3.-** In section 3 of the Principal Act,-

(i) for sub-section (1), the following shall be substituted, namely:-

"(1) The Government or the District Magistrates in their respective jurisdiction, suo moto or based on the market intelligence reports or Police Authority on receipt of any complaint may cause investigation of a complaint or fraudulent transaction referred to in this section through its functionaries, collect the information regarding the properties and money believed to have been acquired by any financial establishment, from public or organisations or other institutions as deemed appropriate. The district magistrate shall forward his report together with the complaints, if any, received by him along with the investigation or inquiry report from the Authorised Authority under section 4 including Police Authorities or Investigation Agencies at District level or State level to the Government (Revenue Department) at the earliest.

(1a) The Secretary to Government, Revenue Department, the competent Authority or any authority nominated by the Government shall, for the purposes of this section, also have the same powers as vested in a civil court under the Code of Civil Procedure, 1908 while conducting investigation or inquiry in respect of the following matters, namely:-

(a) discovery and inspection;
(b) enforcing the attendance of any person, including any officer of a reporting entity and examining him on oath;
(c) compelling the production of records;
(d) receiving evidence on affidavits;
(e) issuing commissions for examination of witnesses and documents; and
(f) any other matter which as may be prescribed.

(1b) All the persons so summoned shall be bound to attend in person or through authorised agents, as such officer may direct, and shall be bound to state

the truth upon any subject respecting which they are examined or make statements, and produce such documents as may be required.

(1c) Every proceeding under this section shall be deemed to be a judicial proceeding within the meaning of section 193 and section 228 of the Indian Penal Code, 1860 (Central Act 45 of 1860)."

(ii) in sub-section (2),-

(a) for clause (i), the following shall be substituted, namely:-

"(i) where, suo moto or based on the market intelligence reports or upon complaint received from any depositors or otherwise, the Secretary to Government, Revenue Department is satisfied that any financial establishment has failed,-

(a) to return the deposit after maturity or on demand by depositor; or

(b) to pay interest or other assured benefit; or

(c) to provide the service against such deposit; or;"

**4. Amendment of section 4.-** In section 4 of the principal Act,-

(a) for sub-section(1) the following shall be substituted, namely:-

“(1) The Competent Authority or Police Authority or any other authority authorised by the Government or the District Magistrate or the Competent Authority in order to carry out the purposes of this Act shall have power to enter and search any premises, seize moveable properties and freeze bank accounts and attach the money or property believed to have been acquired by such financial establishment either in its own name or in the name of any other person from and out of the deposits collected by the financial establishment where it has reason to believe that any register, book, record, paper, application, information in electronic storage and retrieval device or medium, instrument or proceedings are kept and to inspect them and to take such notes and extracts as it may deem necessary”.

(b) in sub-section (2), for the words “Designated authority or any other authority authorized by the designated authority” the words“ the Competent Authority or Police Authority or any other authority authorised by the Government or the District Magistrate or the Competent Authority” shall be substituted.

**5. Amendment of section 5.-** In section 5 of the principal Act,-

(a) after sub-section(1) the following proviso shall be inserted, namely:-

“Provided that, where cases pertaining to any one financial establishment is spread over more than one district, the State Government may appoint one Competent Authority to handle all such cases”.

(b) after sub-section (1), the following shall be inserted namely:-

“(1A) The Government may by notification appoint any officer not below the rank of Assistant Commissioner to assist the Competent Authority, if he is of and above the rank of Deputy Commissioner in discharging his function under this Act and also to file affidavit on his behalf in the designated court.”

(c) after sub-section (2), the following proviso shall be inserted, namely:-

"Provided that, the Secretary to Government, Revenue Department, may on the request of the Competent Authority, extend this period by another fifteen days in cases having valid reasons and based on the merits of the case."

**6. Amendment of section 6.-** In section 6 of the principal Act, after sub-section (2), the following shall be inserted, namely:-

"(3) The Government shall empanel or adopt and notify the list of,-

(a) agencies for valuation of assets and to assist selling of assets to prospective buyers; and

(b) forensic auditors and digital auditor for forensic audit of money trail.

The competent Authority shall utilise the services of such agencies for valuation of assets for selling of assets and for forensic and digital audit of money trail:

Provided that, the Competent Authority may also utilize the services of agencies empanelled by the Securities Exchange Board of India to assist the Court for assessing the value of assets and selling the assets to the prospective buyers in accordance with law, till the Government empanels such agencies:

Provided further that, the Competent Authority may also utilise the services of the Valuers approved by the Nationalised Bank for valuation of assets under the Securitisation and Reconstruction of Financial Assets and Enforcement of Security Interests Act, 2002 (Central Act 54 of 2002) for Valuation of the assets, till the State empanels such agencies:

Provided also that, the Competent Authority may also utilize the services of Forensic Auditor or Digital Auditor empanelled by Indian Bankers' Association for Forensic Audit of Money trail till the State empanels such agencies, wherever felt required."

**7. Amendment of section 7.** - In section 7 of the principal Act, in sub-section (1), for the words "thirty days from the date of appointment", the words and figure "sixty days from the date of appointment or within sixty days from the date of permission received from the Government under section 3 whichever is later", shall be substituted.

**8. Substitution of section 9**.- For section 9 of the principal Act, the following shall be substituted, namely:-

"**9. Fraudulent default by Financial Establishment.-** (1) Any Financial Establishment, which fraudulently defaults any repayment of deposit on maturity along with any benefit in the form of interest, bonus, profit or in any other form as promised or fraudulently fails to render service as assured against the deposit, every person including the promoter, director, partner, manager or any other person or an employee responsible for the management or conducting of the business or affairs of such Financial Establishment, shall on conviction, be punished with imprisonment for a term not less than three years and which may extend to seven years and with fine which may extend to ten lakh rupees and such Financial Establishment also shall be liable for a fine which may extend to an

amount equivalent to five lakh rupees or where such deposits is quantifiable in terms of money twice the amount of aggregate funds collected from subscriber or member whichever is more.

**Explanation.-** For the purpose of this section a Financial Establishment, which commits default in repayment of such deposit with such benefits in form of interest, bonus, profit or in any other form as promised or fails to render any specific service promised against such deposit, or fails to render any specific service agreed against the deposit with an intention of causing wrongful gain to one person or wrongful loss to another person or commits such defaults due to its inability arising out of impracticable or commercially not viable promises made while accepting such deposit or arising out of deployment of money or assets acquired out of the deposits in such manner as it involves inherent risk in recovering the same when needed shall, be deemed to have committed a default or failed to render the specific service, fraudulently.

(2) Whoever having been previously convicted of an offence punishable under this Act, is subsequently convicted of an offence punishable under this Act, shall be punished with imprisonment for a term of not less than five years which may extend to seven years and a fine which shall not be less than ten lakh rupees and which may extend to fifty crore rupees.

(3) (i) Where an offence under this Act has been committed by a financial establishment other than an individual, every person who, at the time the offence was committed, was in conduct of its business, as well as the financial establishment, shall be deemed to be guilty of the offence and shall be liable to be proceeded against and punished accordingly.

(ii) Nothing contained in clause (i) above, shall render any such person liable to any punishment provided in this Act, if he proves that the offence was committed without his knowledge or that he exercised all due diligence to prevent the commission of such offence.

(iii) Notwithstanding anything contained in clause (i) above, where an offence under this Act has been committed by a financial establishment other than an individual, and it is proved that the offence,-

(a) has been committed with the consent or connivance: or

(b) is attributable to any negligence on the part of any Director, Manager, Secretary, Promoter, Partner, Employee or other Officer of the financial establishment;

such persons shall also be deemed to be guilty of that offence and shall be liable to be proceeded against and punished accordingly. "

**9. Amendment of section 10.-**In section 10 of the Principal Act, after sub-section (1), the following proviso, shall be inserted, namely:-

“Provided that, if the Government is of the opinion that where cases pertaining to any financial establishment are spread over more than one District, the Government may, with concurrence of the Chief Justice of the High Court of Karnataka, by notification designate one Court of District or Sessions Judge as special Court to deal with all such cases pertaining to such financial establishment.”

**10. Amendment of section 11. -** In section 11 of the principal Act, in sub-section (2),-

(a) in clause (e) , the words "in the events of the money so realized is not sufficient to meet the entire deposit liability," shall be omitted;

(b) after clause (f), before Explanation, the following shall be inserted, namely:-

"(g) depending upon the magnitude of the fraud wherever the Special Courts feel the need for a committee to be set up for the sake realisation of proceeds and payment to depositors, the special court may constitute such committees, on a case to case basis;

(h) to utilize the e-auction platform for auction of the assets attached under this Act wherever felt necessary;

(i) Utilise the services of empanelled agencies notified by the State Government under section 6 for valuation of assets and selling of assets for prospective buyers, forensic auditors and digital auditor for forensic audit of money trails;

(j) to utilize the services of official liquidator appointed by the Central Government under section 359 of the Companies Act, 2013(Central Act 18 of 2013) and attached to High Courts wherever felt necessary;

(k) to utilize the services of agencies empanelled by Security Exchange Board of India to assist the court for assessing the value of assets and selling the assets to the prospective buyers in accordance with law;

(l) to utilize the services of the valuers approved by any Nationalised Bank for valuation of assets under the Securitisation and Reconstruction of Financial Assets and Enforcement of Securities Interest Act, 2002 (Central Act 54 of 2002) for valuation of the assets; and

(m) pass an order expeditiously for sale of the depreciable movable assets provisionally attached to realise maximum value without allowing such assets to lose their value."

**11. Amendment of section 12.-** In section 12 of the principal Act, for sub-section (6), the following shall be substituted, namely:-

"(6) After investigation under sub-section (5), the Special Court shall pass an order as far as may be within one hundred and eighty days from the date of receipt of application under sub-section (2) of section 5 either making the ad-interim order of attachment absolute or varying it by releasing a portion of the property from attachment or cancelling the ad-interim order of attachment.

Provided that, Special Court shall not release from attachment any interest which it is satisfied that the financial establishment or the person referred to in sub-section (1) has in the property, unless it is also satisfied that there will remain under attachment an amount or property of value not less than the value that is required for repayment to the depositors of such financial establishment.

Provided further that, the special court while according permission to deposit the fair value of the property in lieu of the attachment under section 3 may obtain valuation reports from at least two empanelled valuers while releasing properties."

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



The above translation of ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ಅಧಿನಿಯಮ, 2020 (2021 ರ ಕರ್ನಾಟಕ ಅಧಿನಿಯಮ 06) be published in the official Gazette under clause (3) of Article 348 of the Constitution of India.

**VAJUBHAI VALA**
**GOVERNOR OF KARNATAKA**

By Order and in the name of
the Governor of Karnataka,

**(K.DWARAKANATH BABU)**
Secretary to Government
Department of Parliamentary Affairs
and Legislation

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE
Date: 2021.02.19 17:00:41 +05'30'